ಶ್ರೀ ಜೆ. ಎಚ್. ಪಟೇಲ್.—ಪ್ರಶ್ನೋತ್ತರ ವೇಳೆಯಲ್ಲಿ ವಿವರಕ್ಕೆ ಹೋಗುವುದು ಬೇಕಿಲ್ಲ. ಹೊಸ ಯೋಜನೆಗಳನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಏನೇ ಯೋಜನೆಯಲ್ಲಿ ಅದನ್ನೆಲ್ಲಾ ಕೇಳಿದ್ದೇವೆ. ವಿದ್ಯುತ್ ಜೋತಾ ಏಕಕ್ಕೆ ಆಯಿತು ಎಂದರೆ. ಪತ್ರಿಕೆಯನ್ನು ಒದುತ್ತಿದ್ದಾಗ ಒಂದು ವಿಷಯ ನೋಡಿದೆ, ಇಷ್ಟೊಂದು ವಿದ್ಯುತ್ ಜೋತಾ ಬಗ್ಗೆ ಯಾವ ವಿಜ್ಞಾನಿಯನ್ನು ಕೇಳೋಣ ಎಂದರೆ, ಮಾನ್ಯ ವೀರಪ್ಪಮೊಯ್ಲಿಯವರು ಮಂತ್ರಿಗಳಾಗಿದ್ದಾಗ ಮಾನ್ಯ ಗುಂಡೂರಾಯರು ಒಂದು ಮಾತನ್ನು ಹೇಳಿದ್ದರು, ನಾನು ಈ ವಿಷಯವನ್ನು ಒಂದು ಘಂಟೆಯಲ್ಲಿ ಬಗೆಹರಿಸಂತ್ತೀನೆ ಎಂದು. ಎಂತಹ ಪವಾಡ ಪುರುಷ,ಅಂತಹ ಪವಾಡ ಪುರುಷರು ಇದ್ದುದರಿಂದಲೇ ಈ ರೀತಿ ಆಗಬಹುದು.

ಶ್ರೀ ಕೆ. ಲಕ್ಕಪ್ಪ —ಅಧ್ಯಕ್ಷರೇ, ಈ ಯೋಜನೆಗಳ ಬಗ್ಗೆ.....

(ಗೊಂದಲ)

ಅಧ್ಯಕ್ಷರು.—ಈಗ ಶ್ರೀಮತಿ ನಾಗರತ್ನಮ್ಮನವರ ಮುಂದಿನ ಪ್ರಶ್ನೆ. I have not permitted you.

ಶ್ರೀ ಕೆ. ಎಸ್. ನಾಗರತ್ನಮ್ಮ.—ಈ ಪವಾಡ ಪುರಷರು ಮತ್ತು ಆ ಪವಾಡ ಪುರುಷರು, ಇಬ್ಬರೂ ಒಂದಾಗಿ ದೇಶಕ್ಕೆ ಒಳಿತನ್ನು ಮಾಡಬೇಕೇ ಹೊರತು, ಈ ಸಭೆಯಲ್ಲಿ ಪವಾಡ ಪುರುಷರ ಬಗ್ಗೆ ಚರ್ಚೆ ಸುವುದು ಸರಿಯಲ್ಲ.

ಅಧ್ಯಕ್ಷರು.—ಪವಾಡ ಪುರುಷರು ಎಲ್ಲಾ ಕಡೆ ಇದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಪವಾಡ ಪುರುಷರು ಮತ್ತು ಆ ಪವಾಡ ಪುರುಷರು ಯಾವ ಅಮೃತವನ್ನು ಕುಡಿದು ಬೆಳೆದಿದ್ದಾರೆ ?

ಶ್ರೀ ಕೆ. ಎಸ್. ನಾಗರತ್ನಮ್ಮ.—ಅದು ಅವರಿಗೇ ಗೊತ್ತಿರಬೇಕು.

ಖಾಲಿಯಿರುವ ಪಶುವೈದ್ಯರು ಹಾಗೂ ಪಶು ಪರೀಕ್ಷಕರ ಹುದ್ದೆಗಳು.

೫೧೧. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪಶುವೈದ್ಯರುಗಳು ಹಾಗೂ ಪಶು ಪರೀಕ್ಷಕರುಗಳ ಒಟ್ಟು ಸಂಖ್ಯೆ ಎಷ್ಟು?

ಆ) ಆ ಪೈಕಿ, ಖಾಲಿ ಖಾಲಿ ಇರುವ ಪಶುವೈದ್ಯರುಗಳು ಹಾಗೂ ಪಶುಪರೀಕ್ಷಕರುಗಳ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯನ್ನೋದಗಿಸುವುದು) ?

ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ಹಾಗೂ ಅವುಗಳನ್ನು ಎಷ್ಟು ದಿನಗಳಲ್ಲಿ ತುಂಬಲಾಗುವುದು ?

ಶ್ರೀ ಸಿದ್ಧರಾಮಯ್ಯ (ಪಶು ಸಂಗೋಪನಾ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು—

ಪಶುವೈದ್ಯರು	...	೧೧೪೯	ಹುದ್ದೆಗಳು ಇರುತ್ತವೆ.
ಪಶುಪರೀಕ್ಷಕರು ದರ್ಜೆ–೧	...	೫೩೪	
ಪಶುಪರೀಕ್ಷಕರು ದರ್ಜೆ–೨	...	೧೬೧೬	

ಆ) ಆ ಪೈಕಿ ಖಾಲಿ ಇರುವ ಹುದ್ದೆಗಳು—

ಸಹಾಯಕ ಪಶುವೈದ್ಯರು	...	೭೩
ಪಶುಪರೀಕ್ಷರು ದರ್ಜೆ–೧	...	೧೦
ಪಶುಪರೀಕ್ಷರು ದರ್ಜೆ–೨	...	೨೩

(ಖಾಲಿ ಹುದ್ದೆಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿದೆ)

ಇ) ಖಾಲಿ ಇರುವ ೭೩ ಸಹಾಯಕ ಪಶುವೈದ್ಯರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಿದ ಮೇರೆಗೆ ಕರ್ನಾಟಕ ಲೋಕ ಸೇವಾ ಆಯೋಗವು ತನ್ನ ದಿನಾಂಕ ೩೧-೭-೧೯೮೭ರ ಅಧಿಸೂಚನೆ ಸಂಖ್ಯೆ/ಪಿಎಸ್‌ಸಿ/೧ ಆರ್‌ಟಿಬಿ ೮೨ರಲ್ಲಿ ೭೩ ಪಶುವೈದ್ಯರ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಕರೆಯಲಾಗಿದೆ. ಶೂನ್ಯ ಆಯವ್ಯಯದ ಅನ್ವಯ (ಜೀರೋ ಬಜೆಟ್‌ನಲ್ಲಿ) ಕೆಲವು ಪಶುಪರೀಕ್ಷಕರ ಹುದ್ದೆಗಳು ರದ್ದಾಗುವ ಸಂಭವವಿರುವುದರಿಂದ ಖಾಲಿ ಇರುವ ಪಶುಪರೀಕ್ಷಕರ ಹುದ್ದೆಗಳನ್ನ ವರ್ಗಾವಣೆಯಿಂದ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಗಳು	ಸಹಾಯಕ ಪಶುವೈದ್ಯರು	ಪಶುಪರೀಕ್ಷಕರು ದರ್ಜೆ–೧	ಪಶುಪರೀಕ್ಷಕರು ದರ್ಜೆ–೨
೧	೨	೩	೪	೫
೧	ಬೆಂಗಳೂರು ನಗರ	೨	—	೨
೨	ಬೆಂಗಳೂರು ಗ್ರಾಮಾಂತರ	೧	೧	೨
೩	ತುಮಕೂರು	೧	—	೧
೪	ಕೋಲಾರ	೧	—	೧೪
೫	ಚಿತ್ರದುರ್ಗ	೧	೧	—
೬	ಶಿವಮೊಗ್ಗ	—	—	—
೭	ಮೈಸೂರು	—	೨	—
೮	ಚಿಕ್ಕಮಗಳೂರು	—	೨	—
೯	ಕೊಡಗು	—	೧	—
೧೦	ಮಂಡ್ಯ	—	೧	—
೧೧	ಹಾಸನ	—	೧	—
೧೨	ದಕ್ಷಿಣ ಕನ್ನಡ	—	೧	೨
೧೩	ಬೆಳಗಾವಿ	೭	—	—
೧೪	ಕಾರವಾರ	೩	—	—
೧೫	ಧಾರವಾಡ	೧೧	—	—
೧೬	ಬಿಜಾಪುರ	೭	—	—
೧೭	ಗುಲ್ಬರ್ಗ	೧೪	—	—
೧೮	ಬೀದರ್	೮	—	—
೧೯	ರಾಯಚೂರು	೧೧	—	೨
೨೦	ಬಳ್ಳಾರಿ	೬	—	—
	ಒಟ್ಟು	೭೩	೧೦	೨೩

೧೧–೩೦ ಎ. ಎಂ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಖಾಲಿ ಇರುವಂತಹ ಹುದ್ದೆಗಳು ಎಷ್ಟು ವರ್ಷಗಳಿಂದ ಇವೆ. ಈಗ ೩೧-೭-೮೭ರಲ್ಲಿ ಲೋಕ ಸೇವಾ ಆಯೋಗದವರು ಡಾಕ್ಟರ್‌ಗಳಿಗಾಗಿ ಅರ್ಜಿಗಳನ್ನು ಕರೆದಿದ್ದಾರೆ. ಅವರನ್ನು ಸಂದರ್ಶನ ಮಾಡಿ ಪೋಸ್ಟಿಂಗ್ಸ್ ಮಾಡುವುದು ಯಾವಾಗ ? ಮತ್ತೆ ಶೂನ್ಯ ಅಂದರೆ ಜೀರೋ ಬಜೆಟ್‌ನಲ್ಲಿ ಯಾವ್ಯಾವ ಯೋಜನೆಗಳು ಈ ರಾಜ್ಯದಲ್ಲಿ ರದ್ದಾಗುತ್ತವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಸಿದ್ದರಾಮಯ್ಯ.—೭೩ ಹುದ್ದೆಗಳು ಕಳೆದ ೧ ವರ್ಷದಿಂದಲೂ ಖಾಲಿ ಇವೆ. ಸಹಾಯಕ ಪಶುವೈದ್ಯರ ಹುದ್ದೆಗಳಿವೆ. ಅದರ ವಿವರಗಳನ್ನು ಈಗಾಗಲೇ ವಿರೋಧಪಕ್ಷದ ನಾಯಕಿಯವರಿಗೆ ಕೊಡಲಾಗಿದೆ. ನಮ್ಮ ರಾಜ್ಯದಲ್ಲಿ ಒಂದೇ ಪಶುವೈದ್ಯ ಕಾಲೇಜ್ ಇದ್ದು, ಅಲ್ಲಿಂದ ತೇರ್ಗಡೆಯಾಗಿ ಹೊರಗೆ ಎಷ್ಟು ಜನರು ಬರುತ್ತಾರೋ ಅಷ್ಟು ಜನರನ್ನೂ ನೇಮಕ ಮಾಡುವಂತಹ ಕಾರ್ಯಕ್ರಮವನ್ನು ಮಾಡಿದ್ದೇವೆ. ಈಗ ಖಾಲಿ ಇರತಕ್ಕ ೭೩ ಹುದ್ದೆಗಳ ಬಗ್ಗೆ ನಾವು ಈಗಾಗಲೇ ಲೋಕ ಸೇವಾ ಆಯೋಗದವರಲ್ಲಿ ಮನವಿ ಮಾಡಿಕೊಂಡಿದ್ದೇವೆ. ಅವರು ಅರ್ಜಿಗಳನ್ನೂ ಕೂಡ ಕರೆದಿವ್ವಾರೆ. ಅವರು ಆಯ್ಕೆ ಮಾಡಿ ನಮಗೆ ಕಳುಹಿಸಿದ ಕೂಡಲೇ ಆ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಜೀರೋ ಬೇಸ್ಡ್ ಬಗ್ಗೆ ಹೇಳುವುದಾದರೆ, ಅಲ್ಲಿರತಕ್ಕ ಪಶು ಪರೀಕ್ಷಕರ ಹುದ್ದೆಗಳು ಖಾಲಿಯಾಗುತ್ತವೆ ಉದಾಹರಣೆಗೆ ಹೇಳುವುದಾದರೆ, ಕೇ-ಎಲೇಜ್ ಸ್ಕೀಂ ಅಂತ ಕರ್ನಾಟಕ ರಾಜ್ಯದಲ್ಲಿತ್ತು. ಗೊಳಿಗಳನ್ನು ಇಟ್ಟು ಅದರಿಂದ ಸೆಮನ್ ಅನ್ನು ಕಲೆಕ್ಟ್ ಮಾಡಿ ಜಾನುವಾರುಗಳಿಗೆ ಕೊಡತಕ್ಕ ಕಾರ್ಯಕ್ರಮ ಅದು. ಈಗ ಕೃತಕ ಗರ್ಭಧಾರಣೆ ಯೋಜನೆ ಬಂದ ಮೇಲೆ ಆ ಯೋಜನೆಯನ್ನು ತೆಗೆದುಹಾಕಿದ್ದೇವೆ. ಅಲ್ಲಿರತಕ್ಕ ಪಶುಪರೀಕ್ಷಕರ ಹುದ್ದೆಗಳು ರದ್ದಾಗುತ್ತದೆ. ಅಂತಹವರನ್ನು ಖಾಲಿಯಿರತಕ್ಕ ಪಶುಪರೀಕ್ಷಕರ ಜಾಗಗಳಲ್ಲಿ ಭರ್ತಿ ಮಾಡಲಾಗುವುದು. ಅಂತಹ ೧೦ ಪಶು ಪರೀಕ್ಷಕರ ಹುದ್ದೆಗಳು ದರ್ಜೆ ಕ್ಲಾಸ್ (೧) ನಂತರ ೨೩ ಕ್ಲಾಸ್ (೨) ಪಶು ಪರೀಕ್ಷಕರ ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ರಮೇಶ್ ಕುಮಾರ್.—ಕಳೆದ ೪-೫ ವರ್ಷಗಳಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳು ಹೆಚ್ಚಾಗಿ ನಮ್ಮ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿವೆ. ಅಂದರೆ ಅದರ ಅರ್ಥ ಅನೇಕ ಗ್ರಾಮಗಳಲ್ಲೂ ಕೂಡ ಇವತ್ತಿನ ದಿವಸ ಉತ್ಪಮ ತಳಿಗಳ ಹಸುಗಳನ್ನು ಇಟ್ಟುಕೊಳ್ಳುವವರು ಹೆಚ್ಚಾಗಿದ್ದಾರೆ. ೪-೫ ವರ್ಷಗಳ ಹಿಂದೆ ಪಶು ಪರೀಕ್ಷಕರ ಹಾಗೂ ಪಶುವೈದ್ಯರ ಪ್ರಮಾಣ ಏನು ಇತ್ತು ? ಈಗ ಯಾವ ಪ್ರಮಾಣದಲ್ಲಿದೆ ? ಇದು ನಿಜವಾಗಿಯೂ ರೈತರ ಹಿತರಕ್ಷಣೆಯನ್ನು ಮಾಡತಕ್ಕ ದಿಸೆಯಲ್ಲಿ ಇಲಾಖೆ ಕೆಲಸ ಮಾಡುತ್ತಿದೆಯೇ ? ಇದ್ದುದರಲ್ಲಿ ಸಾಲು-ಸೋಲ ಮಾಡಿ ಹಸುಗಳನ್ನು ರೈತರು ತರುತ್ತಾರೆ. ಅವುಗಳನ್ನು ಪರೀಕ್ಷೆ ಮಾಡುವುದಕ್ಕೆ ಯಾರೂ ಇಲ್ಲ. ನಾವೇನೂ ಡಾಕ್ಟರುಗಳನ್ನೇ ಕೇಳುತ್ತಿಲ್ಲ. ಕಡೆಯಪಕ್ಷ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್‌ಗಳನ್ನಾದರೂ ಕೊಡಿ ಅಂದರೆ ಇಲ್ಲ ಅಂತ ಹೇಳುತ್ತಾರೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಸಿದ್ದರಾಮಯ್ಯ.—ಇಲಾಖೆಗೆ ಕರ್ನಾಟಕ ರಾಜ್ಯದಲ್ಲಿರತಕ್ಕ ಜಾನುವಾರುಗಳಿಗೆ ಅವುಗಳ ಆರೋಗ್ಯವನ್ನು ರಕ್ಷಣೆ ಮಾಡತಕ್ಕ ದಿಸೆಯಲ್ಲಿ ಕಳಕಳಿಯಿದೆ.

ಶ್ರೀ ರಮೇಶ್ ಕುಮಾರ್.—ಇಲಾಖೆಗಿದೆಯೇ ? ನಿಮಗೆ ಇದೆ. ಅದನ್ನು ಒಪ್ಪಿಕೊಳ್ಳುತ್ತೇನೆ

ಶ್ರೀ ಸಿದ್ದರಾಮಯ್ಯ.—ನನಗೂ ಇದೆ. ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೂ ಇದೆ. ಒಂದು ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಜಾನುವಾರುಗಳ ಸಂಖ್ಯೆಗನುಗುಣವಾಗಿ ಎಷ್ಟು ಪಶುವೈದ್ಯ ಶಾಲೆಗಳು ಇರಬೇಕೋ ಅಷ್ಟು ಪಶುವೈದ್ಯ ಶಾಲೆಗಳು ಇಲ್ಲ, ರಾಜ್ಯದಲ್ಲಿರತಕ್ಕ ಜಾನುವಾರುಗಳ ಸಂಖ್ಯೆಗಳಿಗನುಸಾರವಾಗಿ ಇನ್ನೂ ೮೦೦ ಪಶುವೈದ್ಯ ಶಾಲೆಗಳನ್ನು ತೆರೆಯಬೇಕಾಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆಯೇ ಪಶು-ಪರೀಕ್ಷಕರು ಹಾಗೂ ಔಷಧ ಮಿಶ್ರಣಕಾರರ ಕೊರತೆ ಇತ್ತು. ಅವರಿಗೆ ಸೂಕ್ತ ತರಬೇತಿಯನ್ನು ಕೊಟ್ಟು ಭರ್ತಿ ಮಾಡಲಾಗಿದೆ. ೨೩ ಕ್ಲಾಸ್ (೨) ಪಶುಪರೀಕ್ಷಕರ ಹುದ್ದೆಗಳು ಹಾಗೂ ೧೦ ಕ್ಲಾಸ್ (೧) ಪಶು ಪರೀಕ್ಷಕರ ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ತುಂಬುವ ಸಲುವಾಗಿ ಈ ವರ್ಷ ಕೂಡ ಪಶು ಪರೀಕ್ಷಕರ ಹಾಗೂ ಔಷಧ ವಿಶ್ರಣಕಾರರ ತರಬೇತಿಗೋಸ್ಕರ ರಾಜ್ಯದ ೪ ವಿಭಾಗಗಳಲ್ಲೂ ಅರ್ಜಿಗಳನ್ನು ಕರೆದಿದ್ದು ಆಯ್ಕೆ ಕೂಡ ನಡೆಯುತ್ತದೆ. ಅವರು ಬಂದ ಮೇಲೆ ಹೆಚ್ಚು ಪಶುವೈದ್ಯ ಶಾಲೆಗಳನ್ನು ತೆರೆಯತಕ್ಕ ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ. ಕ್ಷೀರ ಯೋಜನೆ ೧, ೨, ೩, ಬರುವುದರಿಂದ, ಈವತ್ತು ಪಶು ಪರೀಕ್ಷಕರು ಹೆಚ್ಚಾಗಬೇಕೆಂಬುದನ್ನು ಮನಗಂಡ ಅವುಗಳನ್ನು ಹೆಚ್ಚು ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತದೆ,

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಈ ಇಲಾಖೆಯನ್ನು ತಾವು ವಹಿಸಿಕೊಂಡು ನೋಡಿದ್ದೀರಿ. ಅದಕ್ಕೆ ತಮ್ಮ ಅಭಿಪ್ರಾಯ ಏನಿದೆ ಎಂಬುದನ್ನು ಈ ಇಲಾಖೆಯ ಬಗ್ಗೆ ಹೇಳಬೇಕು ?

ಅಧ್ಯಕ್ಷರು.—ನಾನು ಏತಕ್ಕೆ ಹೇಳಬೇಕು ? ನಾನು ಸರ್ಕಾರಿ ಮಂತ್ರಿಯಲ್ಲ, ನಾನು ಈ ಮನೆಯ ಸ್ಪೀಕರ್.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನ್ನ ತಾಲ್ಲೂಕಿನಲ್ಲಿ ಬೇಗೂರು ಹಳ್ಳಿಯಲ್ಲಿ ಬಿಲ್ಡಿಂಗ್ ಕಟ್ಟಿ ಅವು ರೆಡಿಯಾಗಿ ಮೂರು ವರ್ಷಗಳಾಗಿವೆ. ಆ ಬಿಲ್ಡಿಂಗ್ ಹಾಳಾಗುತ್ತಿವೆ. ಅಲ್ಲಿ ಸಿಬ್ಬಂದಿಯನ್ನು ಪೋಸ್ಟಿಂಗ್ ಮಾಡುವುದಕ್ಕೆ ಸಾಧ್ಯವೆ ಅದನ್ನು ಮಾಡುತ್ತೀರಾ ?

ಶ್ರೀ ಸಿದ್ದರಾಮಯ್ಯ.—ಮಾಡಿಕೊಡುತ್ತೇನೆ.

ಗಂಧದ ಮರಗಳ ಕಳ್ಳ ಸಾಗಾಣಿಕೆ

೨೨೪. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಇದುವರೆವಿಗೆ ಎಷ್ಟು ಗಂಧದ ಮರಗಳ ಸಾಗಾಣಿಕೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ?

ಆ) ಈ ಬಗ್ಗೆ ಹಿಡಿಯಲಾದ ಗಂಧದ ಮರದ ಹಣದ ಮೌತ್ತವೆಷ್ಟು ?

ಇ) ಗಂಧದ ಮರಗಳನ್ನು ಉಪಯೋಗಿಸಲು ಎಷ್ಟು ಜನರಿಗೆ ಪರವಾನಿಗೆ ನೀಡಲಾಗಿದೆ ?

ಶ್ರೀ ಜೆ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೧೯೮೩-೮೪ ರಿಂದ ೧೯೮೬-೮೭ (ಡಿಸೆಂಬರ್ ೧೯೮೬ ವರಗಿನ) ಗಂಧದ ಮರ ಸಾಗಾಣಿಕೆ ಪ್ರಕರಣಗಳ ವಿವರ ಈ ಕೆಳಗಿನಂತಿದೆ.—

೧೯೮೩-೮೪	೩೮೭
೧೯೮೪-೮೫	೩೮೨
೧೯೮೫-೮೬	೫೭೨
೧೯೮೬-೮೭	೪೪೫
(೩೧-೧೨-೧೯೮೬ರ ವರೆಗೆ)	

ಆ) ಹಿಡಿಯಲಾದ ಗಂಧದ ಮರದ ಹಣದ ಮೌತ್ತ ಈ ಕೆಳಗಿನಂತಿದೆ.—

೧೯೮೩-೮೪	೪೪,೮೬,೬೯೫-೦೦
೧೯೮೪-೮೫	೪೩,೬೧,೨೧೨-೦೦
೧೯೮೫-೮೬	೬೯,೭೭,೭೭೯-೦೦
೧೯೮೬-೮೭	೧,೦೪,೫೫,೫೫೪-೦೦
(೩೧-೧೨-೧೯೮೬ರ)	ಡಿಸೆಂಬರ್ ಅಂತ್ಯದವರೆಗೆ)

ಇ) ಗಂಧದ ಮರಗಳನ್ನು ಉಪಯೋಗಿಸಲು ಪರವಾನಿಗೆ ಕೊಟ್ಟಿಲ್ಲ.

ಗಂಧದ ಮರಗಳನ್ನು ಸ್ವಾಧೀನ ಪಡಿಸಿಕೊಂಡಿರುವುದು

೫೩೬. ಶ್ರೀ ಐ. ಬಿ. ಶಂಕರ್, (ಚಿಕ್ಕ ಮಂಗಳೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕ ಮಗಳೂರು ಅರಣ್ಯ ವಿಭಾಗದ ಸ್ಕ್ವಾಡ್‌ನವರು ಇದುವರೆಗೂ ಹಿಡಿದಿರುವ ಕಳ್ಳ ಸಾಗಾಣಿಕೆಯ ಗಂಧದ ಮರದ ಪ್ರಮಾಣ ಎಷ್ಟು ?

ಆ) ಅರಣ್ಯ ಇಲಾಖೆಯಲ್ಲಿನ ಅಧಿಕಾರಿಗೆ ಅವರ ಉತ್ತಮ ಸೇವೆಗೆ ಬಹುಮಾನ ನೀಡಲಾಗುವುದೆಂದು ಪ್ರಕಟಿಸಿರುವುದು ನಿಜವಲ್ಲವೇ ?